# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **504**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಗೋವಿಂದರಾಜು**

**ಉತ್ತರಿಸುವ ದಿನಾಂಕ** : **14-08-2025**

**ಉತ್ತರಿಸುವ ಸಚಿವರು** : **ಗೃಹ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 05 ವರ್ಷದಿಂದ ಇಲ್ಲಿಯವರೆಗೂ ದೌರ್ಜನ್ಯಕ್ಕೊಳಗಾದ ಪ್ರಕರಣಗಳ ಸಂಖ್ಯೆಯೆಷ್ಟು; ಇದರಲ್ಲಿ ಇತ್ಯರ್ಥವಾದ ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆಯೆಷ್ಟು; | ರಾಜ್ಯದಲ್ಲಿ ಕಳೆದ 05 ವರ್ಷದಿಂದ ಇಲ್ಲಿಯವರೆಗೂ ದೌರ್ಜನ್ಯಕ್ಕೊಳಗಾದ ಪ್ರಕರಣಗಳ ಮಾಹಿತಿಯನ್ನು **ಅನುಬಂಧದಲ್ಲಿ ಒದಗಿಸಲಾಗಿದೆ.** |
| ಆ) | ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆಯಡಿಯಲ್ಲಿ ಯಾವ ಯಾವ ಪ್ರಕರಣಗಳಿಗೆ ಪರಿಹಾರ ನೀಡಲಾಗುವುದು: ಕಳೆದ 05 ವರ್ಷದಿಂದ ಪರಿಹಾರ ವಿತರಣೆಗಾಗಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು: | ಕರ್ನಾಟಕ ಸಂತ್ರಸ್ಥರ ಪರಿಹಾರ ಯೋಜನೆಯಡಿ ಅತ್ಯಾಚಾರ, ಪೋಕ್ಸೋ, ಹಲ್ಲೆಗೊಳಗಾದ, ಆಸಿಡ್ ದಾಳಿಗೊಳಗಾದ ಹಾಗೂ ಕೊಲೆಯಾಗಿರುವ ಪ್ರಕರಣಗಳಿಗೆ ಪರಿಹಾರವನ್ನು ನೀಡಲಾಗುತ್ತದೆ. ಕಳೆದ 5 ವರ್ಷದಿಂದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸರ್ಕಾರದಿಂದ ರೂ.46,75,45,000/-ಗಳ ಅನುದಾನ ಬಿಡುಗಡೆಯಾಗಿರುತ್ತದೆ. |
| ಇ) | ದೌರ್ಜನ್ಯಕ್ಕೊಳಗಾದವರಿಗೆ ನೀಡುವ ಸಂತ್ರಸ್ತ ಪರಿಹಾರ ಯೋಜನೆ ನೆನೆಗುದಿಗೆ ಬಿದ್ದಿದ್ದು, 45 ಕೋಟಿ ರೂ. ಗೆ ಬೇಡಿಕೆ ಸಲ್ಲಿಸಿದ್ದಾಗ್ಯೂ ಸರ್ಕಾರ ಕೇವಲ 10 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿರುವುದು ನಿಜವೇ: ಹಾಗಿದ್ದಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವ ಹಣ ನೀಡಲು ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು? | ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 ರಡಿ 2023-24 ನೇ ಸಾಲಿನಿಂದ ವಾರ್ಷಿಕ ರೂ.10.00 ಕೋಟಿಯಂತೆ ಸರ್ಕಾರದಿಂದ ಒದಗಿಸಲಾದ ಒಟ್ಟು ರೂ.30.00 ಕೋಟಿಗಳ ಅನುದಾನದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ರೂ.29.4 ಕೋಟಿಗಳ ವೆಚ್ಚ ಭರಿಸಲಾಗಿದ್ದು, ರೂ.60.00 ಲಕ್ಷಗಳ ಅನುದಾನ ಪ್ರಾಧಿಕಾರದ ಬಳಿ ಲಭ್ಯವಿರುತ್ತದೆ.<br><br>2025-26 ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಲ್ಲಿ ಮೀಸಲಿಡಲಾದ ರೂ.10.00 ಕೋಟಿಗಳ ಪೈಕಿ ಮೊದಲ ತ್ರೈಮಾಸಿಕದಲ್ಲಿ ರೂ.2.5 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2025-26ನೇ ಸಾಲಿಗೆ ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 ರಡಿ ಹೆಚ್ಚುವರಿಯಾಗಿ ರೂ.35.00 ಕೋಟಿ ಅನುದಾನವನ್ನು ಒದಗಿಸಲು ಕೋರಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಸಲ್ಲಿಸಲಾದ ಪ್ರಸ್ತಾವನೆ ಕುರಿತಂತೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದೆ. |

| | | | |
|---|---|---|---|
| | | | 2025-26ನೇ ಸಾಲಿಗೆ ಒಟ್ಟು 896 ಪ್ರಕರಣಗಳಲ್ಲಿ 448 ಪ್ರಕರಣಗಳು ಇತ್ಯರ್ಥವಾಗಬಹುದು ಎಂದು ನೀರಿಕ್ಷಿಸಲಾಗಿದ್ದು, ರೂ.16.00 ಕೋಟಿ ಅನುದಾನ ಅಗತ್ಯವಾಗಬಹುದು ಎಂದು ಆರ್ಥಿಕ ಇಲಾಖೆಯು ಅಂದಾಜಿಸಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಹಾಗೂ 2025-26ನೇ ಸಾಲಿನಲ್ಲಿ ಒದಗಿಸಲಾಗುವ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಿದ ನಂತರ ಹೆಚ್ಚುವರಿ ಅನುದಾನವನ್ನು ಒದಗಿಸಬಹುದಾಗಿದೆ ಎಂದು ತಿಳಿಸಿರುತ್ತದೆ.<br><br>ಅದರಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಹಾಗೂ 2025-26ನೇ ಸಾಲಿನಲ್ಲಿ ಒದಗಿಸಲಾಗುವ ಅನುದಾನವನ್ನು ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕಾಗಿ ವಿನಿಯೋಗಿಸಿದ ನಂತರ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ಕಾರದ ಪತ್ರ ಸಂಖ್ಯೆ: HD 68 PCB 2025, ದಿನಾಂಕ:01.08.2025ರಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ತಿಳಿಸಲಾಗಿದೆ. |

**ಸಂಖ್ಯೆ: HD 66 PCQ 2025**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

ಅನುಬಂಧ-1

## ರಾಜ್ಯದಲ್ಲಿ 2020ನೇ ಸಾಲಿನಿಂದ 2025 (ಜುಲೈ) ರವರೆಗೆ ದಾಖಲಾದ ದೌರ್ಜನ್ಯ ಪ್ರಕರಣಗಳ ಅಂಕಿ ಅಂಶ

| ವರ್ಷ | ಎಸ್‌ಸಿ ಎಸ್‌ಟಿ ಪ್ರಕರಣಗಳು | | | ಅತ್ಯಾಚಾರ ಪ್ರಕರಣ | | | ಲೈಂಗಿಕ ಕಿರುಕುಳ | | | ವರದಕ್ಷಿಣೆ ಸಾವು | | | ಗಂಡನಿಂದ ಕಿರುಕುಳ | | |
|---|---|---|---|---|---|---|---|---|---|---|---|---|---|---|---|
| | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ |
| **2020** | 1835 | 16 | 1819 | 479 | 4 | 475 | 4546 | 42 | 4504 | 176 | 0 | 176 | 2027 | 3 | 2024 |
| **2021** | 2129 | 18 | 2111 | 555 | 5 | 550 | 4915 | 28 | 4887 | 157 | 0 | 157 | 2273 | 10 | 2263 |
| **2022** | 2519 | 59 | 2460 | 537 | 13 | 524 | 5856 | 63 | 5793 | 161 | 0 | 161 | 2780 | 31 | 2749 |
| **2023** | 2553 | 79 | 2474 | 600 | 20 | 580 | 6489 | 164 | 6325 | 158 | 3 | 155 | 2959 | 53 | 2906 |
| **2024** | 2534 | 86 | 2448 | 739 | 52 | 687 | 6334 | 757 | 5577 | 112 | 3 | 109 | 2910 | 251 | 2659 |
| **2025 (ಜುಲೈ)** | 1540 | 627 | 913 | 549 | 274 | 275 | 3450 | 2164 | 1286 | 70 | 27 | 43 | 1677 | 1028 | 649 |
| **ಒಟ್ಟು** | **13110** | **885** | **12225** | **3459** | **368** | **3091** | **31590** | **3218** | **28372** | **834** | **33** | **801** | **14626** | **1376** | **13250** |

| ವರ್ಷ | ಡಿ.ಪಿ ಕಾಯ್ದೆ | | | ಪೋಕ್ಸೋ | | | ಬಾಲ ಕಾರ್ಮಿಕ | | | ಬಾಲ್ಯ ವಿವಾಹ | | | ಜೆ. ಜೆ ಕಾಯ್ದೆ | | |
|---|---|---|---|---|---|---|---|---|---|---|---|---|---|---|---|
| | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ | ದಾಖಲಾದ ಪ್ರಕರಣ | ಬಾಕಿ ಇರುವ ಪ್ರಕರಣ | ಇತ್ಯರ್ಥಗೊಂಡ ಪ್ರಕರಣ |
| **2020** | 1538 | 8 | 1530 | 2165 | 6 | 2159 | 54 | 0 | 54 | 180 | 0 | 180 | 40 | 0 | 40 |
| **2021** | 1891 | 17 | 1874 | 2884 | 7 | 2877 | 58 | 0 | 58 | 263 | 0 | 263 | 76 | 2 | 74 |
| **2022** | 2246 | 48 | 2198 | 3209 | 13 | 3196 | 62 | 0 | 62 | 216 | 0 | 216 | 77 | 3 | 74 |
| **2023** | 2337 | 182 | 2155 | 3902 | 20 | 3882 | 129 | 1 | 128 | 143 | 2 | 141 | 96 | 7 | 89 |
| **2024** | 1986 | 313 | 1673 | 4064 | 38 | 4026 | 106 | 5 | 101 | 151 | 17 | 134 | 141 | 30 | 111 |
| **2025 (ಜುಲೈ)** | 1133 | 774 | 359 | 2544 | 616 | 1928 | 53 | 33 | 20 | 123 | 77 | 46 | 97 | 64 | 33 |
| **ಒಟ್ಟು** | **11131** | **1342** | **9789** | **18768** | **700** | **18068** | **462** | **39** | **423** | **1076** | **96** | **980** | **527** | **106** | **421** |